**ಕೌನ್ಸಿಲಿಂಗ್‌ಗೆ ಹಾಜರಾಗುವ ಬಿ.ಇಡಿ ಅಭ್ಯರ್ಥಿಗಳ ಗಮನಕ್ಕೆ**

2019–20ನೇ ಸಾಲಿನ ಎರಡು ವರ್ಷದ ಬಿ.ಇಡಿ ಕೋರ್ಸಿನ ದಾಖಲಾತಿಗಾಗಿ ದಿನಾಂಕ: 25–09–2019 ರಿಂದ 11–10–2019ರವರೆಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03 ಇಲ್ಲಿ ನಡೆಯುವ ಪ್ರಥಮ ಸುತ್ತಿನ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲಿರುವ ಅಭ್ಯರ್ಥಿಗಳಿಗೆ ಸೂಚನೆಗಳು.

| | | |
|---|---|---|
| 1 | ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅರ್ಹತೆ ಹೊಂದಿರುವ ಅಭ್ಯರ್ಥಿಗಳು | ದಿನಾಂಕ: 21–09–2019ರಂದು ಪ್ರಕಟಿಸಿರುವ ದಿನಾಂಕವಾರು ಕೌನ್ಸಿಲಿಂಗ್ ಪಟ್ಟಿಯಲ್ಲಿ ಹೆಸರಿರುವ ಅಭ್ಯರ್ಥಿಗಳು ಮಾತ್ರ ನಿಗದಿಪಡಿಸಿದ ದಿನದಂದು ಮಾತ್ರ ಕೌನ್ಸಿಲಿಂಗ್‌ಗೆ ಹಾಜರಾಗಲು ಅವಕಾಶವಿರುತ್ತದೆ |
| 2 | ಸೀಟುಗಳ ಲಭ್ಯತೆ | ದಿನಾಂಕ: 25–09–2019ರಿಂದ ನಡೆಯಲಿರುವ ಕೌನ್ಸಿಲಿಂಗ್‌ಗೆ ವಿವಿಧ ಜಿಲ್ಲೆಯ ಕಾಲೇಜುಗಳಲ್ಲಿ ಲಭ್ಯವಿರುವ ಪ್ರವರ್ಗವಾರು ಸೀಟುಗಳ ಸಂಖ್ಯೆಯನ್ನು ನಮೂದಿಸಿ ಪ್ರಕಟಿಸಲಾಗುವುದು. ಪ್ರತಿನಿತ್ಯ ಕೌನ್ಸಿಲಿಂಗ್ ಮುಗಿದ ನಂತರ ಉಳಿಕೆ ಸೀಟುಗಳ ಮಾಹಿತಿಯನ್ನು ಶಿಕ್ಷಣ ಇಲಾಖಾ www.schooleducation.kar.nic.in ವೆಬ್‌ಸೈಟ್‌ನಲ್ಲಿ ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03 ಈ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲಾಗುತ್ತದೆ. ಅಭ್ಯರ್ಥಿಗಳು ಕೌನ್ಸಿಲಿಂಗ್‌ಗೆ ಹಾಜರಾಗುವ ಪೂರ್ವದಲ್ಲಿ, ಸೂಚನಾಫಲಕ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಲಭ್ಯ ಸೀಟುಗಳ ವಿವರಗಳನ್ನು ಪರಿಶೀಲಿಸಿಕೊಂಡು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಕೌನ್ಸಿಲಿಂಗ್‌ಗೆ ಹಾಜರಾಗುವುದು. |
| 3 | ಕೌನ್ಸಿಲಿಂಗ್ ದಿನಾಂಕ:<br><br>ಸಮಯ:<br><br>ಸ್ಥಳ: | 25–09–2019ರಿಂದ ಪ್ರಾರಂಭವಾಗುತ್ತದೆ.<br><br>ಪ್ರತಿ ದಿನ ಬೆಳಿಗ್ಗೆ 9.00 ಗಂಟೆಗೆ ಪ್ರಾರಂಭ<br><br>ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03 |
| 4 | ಕೌನ್ಸಿಲಿಂಗ್‌ಗೆ ಅರ್ಹತೆ ಹೊಂದಿಲ್ಲದ ಅಭ್ಯರ್ಥಿಗಳು | ದಿನಾಂಕ: 23–08–2019 ರಂದು ಪ್ರಕಟಿಸಿರುವ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿ ಹಂಚಿಕೆ ಮಾಡಿದ್ದ ಸಂಸ್ಥೆಗಳಲ್ಲಿ ವ್ಯವಸ್ಥಾಪಕ ಕೇಂದ್ರಗಳ ಮೂಲಕ ದಾಖಲಾಗಿರುವವರು ಮತ್ತೊಮ್ಮೆ ಕೌನ್ಸಿಲಿಂಗ್‌ಗೆ ಹಾಜರಾಗಲು ಅರ್ಹತೆ ಹೊಂದಿರುವುದಿಲ್ಲ. |

| | | |
|---|---|---|
| 5 | ದಾಖಲಾತಿ ಶುಲ್ಕ | ಕಲಾ ವಿಭಾಗಕ್ಕೆ – 5025+4000+1000<br><br>ವಿಜ್ಞಾನ ವಿಭಾಗಕ್ಕೆ – 5175+4000+1000<br><br>ದಾಖಲಾತಿ ಬಯಸಿ ಕೌನ್ಸಿಲಿಂಗ್‌ಗೆ ಹಾಜರಾಗುವ ಅಭ್ಯರ್ಥಿಗಳು ಮೇಲೆ ತಿಳಿಸಿರುವ ವಿವಿಧ ಶುಲ್ಕಗಳಿಗೆ ಪ್ರತ್ಯೇಕವಾಗಿ ಮೂರು ಬೇಡಿಕೆ ಹುಂಡಿಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಇತರೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಖರೀದಿಸಿ ತರುವುದು.<br><br>ವಾರ್ಷಿಕ ಆದಾಯ ರೂ. 2.50 ಲಕ್ಷ ಮತ್ತು ಅದಕ್ಕಿಂತ ಕಡಿಮೆ ಇರುವ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹೊಂದಿರುವ ಪ.ಜಾತಿ ಮತ್ತು ಪ.ಪಂಗಡದ ಅಭ್ಯರ್ಥಿಗಳಿಗೆ ಮಾತ್ರ ಶುಲ್ಕ ವಿನಾಯಿತಿ ಇರುತ್ತದೆ. ಇವರು ಮೇಲೆ ತಿಳಿಸಿರುವಂತೆ ಬ್ಯಾಂಕ್ ಹುಂಡಿಗಳನ್ನು ತರುವ ಅವಶ್ಯಕತೆ ಇರುವುದಿಲ್ಲ.<br><br>ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪತ್ರ ಸಲ್ಲಿಕೆ ಕಡ್ಡಾಯವಾಗಿರುತ್ತದೆ.<br><br>ಆದರೆ ಉಳಿದ ಪ್ರವರ್ಗವಾರು ಅಭ್ಯರ್ಥಿಗಳು ಮೇಲೆ ತಿಳಿಸಿರುವಂತೆ ಪ್ರತ್ಯೇಕವಾಗಿ ಬ್ಯಾಂಕ್ ಹುಂಡಿಗಳನ್ನು ತರುವುದು. |
| 6 | ಬ್ಯಾಂಕ್ ಹುಂಡಿಯನ್ನು ಖರೀದಿಸುವ ಹೆಸರು | ಅಭ್ಯರ್ಥಿಗಳು ಕೌನ್ಸಿಲಿಂಗ್‌ಗೆ ಹಾಜರಾಗುವ ಮುಂಚೆಯೇ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಯಾವುದೇ ಶಾಖೆಯಿಂದ ಅಥವಾ ಇತರೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಮೇಲೆ ತಿಳಿಸಿರುವಂತೆ ಮೂರು ಪ್ರತ್ಯೇಕ ಬ್ಯಾಂಕ್ ಹುಂಡಿಗಳನ್ನು 'Special Officer, C.A.C, Bangalore' Payable at Bangalore ಇವರ ಹೆಸರಿಗೆ ಖರೀದಿಸಿ ತರುವುದು. |
| 7 | ದಿನಾಂಕ: 24–09–2019ರಿಂದ ನಡೆಯುವ ಕೌನ್ಸಿಲಿಂಗ್‌ಗೆ ಪ್ರಕಟವಾಗುವ ಪಟ್ಟಿ | ದಿನಾಂಕ: 25–09–2019ರಿಂದ ನಡೆಯುವ ಕೌನ್ಸಿಲಿಂಗ್‌ಗೆ ಅರ್ಹತೆ ಹೊಂದಿರುವ ಅಭ್ಯರ್ಥಿಗಳ ಸಮಗ್ರ ಪಟ್ಟಿಯನ್ನು<br><br>www.schooleducation.kar.nic.in ಇಲಾಖಾ ವೆಬ್‌ಸೈಟ್‌ನಲ್ಲಿ ದಿನಾಂಕ: 21–09–2019ರಂದು ಪ್ರಕಟಿಸಲಾಗುವುದು. |

| | | |
|---|---|---|
| 8 | ಕೌನ್ಸಿಲಿಂಗ್ ಸಂದರ್ಭದಲ್ಲಿ ಪರಿಶೀಲನೆಗೆ ಹಾಜರುಪಡಿಸಬೇಕಾದ ಮೂಲ ದಾಖಲೆಗಳು (Original documents) | 1. ಎಸ್.ಎಸ್.ಎಲ್.ಸಿ ಅಂಕಪಟ್ಟಿ.<br>2. ಪಿ.ಯು.ಸಿ ಅಂಕಪಟ್ಟಿ.<br>3. ಪದವಿಯ ಎಲ್ಲಾ ವರ್ಷಗಳ, ಎಲ್ಲಾ ಪ್ರಯತ್ನಗಳ ಅಂಕಪಟ್ಟಿಗಳು.<br>4. ಸ್ನಾತಕೋತ್ತರ ಪದವಿಯ ಅಂಕಪಟ್ಟಿಗಳು (ನಮೂದಿಸಿದ್ದಲ್ಲಿ ಮಾತ್ರ) (ಪುನರಾವರ್ತಿತ ಅಭ್ಯರ್ಥಿಗಳು ಪ್ರತಿ ವರ್ಷದ ಕ್ರೋಢೀಕೃತ ಅಂಕಪಟ್ಟಿಗಳನ್ನು ಅಥವಾ ಎಲ್ಲಾ ಪ್ರಯತ್ನಗಳ (all attempts) ಅಂಕಪಟ್ಟಿಗಳು.<br>5. 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿರುವ ಪ್ರಮಾಣ ಪತ್ರಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ಸಹಿ ಮಾಡಿಸಿರಬೇಕು. ಪದವಿ ಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡಿರುವ ಪ್ರಮಾಣ ಪತ್ರಗಳಿಗೆ ಆಯಾ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಿಂದ ಮೇಲು ಸಹಿ ಮಾಡಿಸಿರಬೇಕು. ಕರ್ನಾಟಕ ರಾಜ್ಯದಲ್ಲಿ ಕನಿಷ್ಟ 07 ವರ್ಷಗಳು ವ್ಯಾಸಂಗ ಮಾಡಿರುವ ಬಗ್ಗೆ "ವ್ಯಾಸಂಗ ಪ್ರಮಾಣ ಪತ್ರ" ಹಾಜರುಪಡಿಸುವುದು.<br>6. 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಪ್ರಮಾಣ ಪತ್ರ (ಅನ್ವಯಿಸುವವರು ಮಾತ್ರ)<br>7. ಜಾತಿ ಪ್ರಮಾಣ ಪತ್ರ.<br>8. ಆದಾಯ ಪ್ರಮಾಣ ಪತ್ರ (ಪರಿಶಿಷ್ಟ ಜಾತಿ & ಪಂಗಡದ ಅಭ್ಯರ್ಥಿಗಳಿಗೆ ಮಾತ್ರ)<br>9. ವಿಶೇಷ ಗುಂಪಿನ ಪ್ರಮಾಣ ಪತ್ರಗಳು (ವಿಶೇಷ ಗುಂಪಿನಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮಾತ್ರ)<br>10. ಅಭ್ಯರ್ಥಿಯ ಆನ್‌ಲೈನ್ ಅರ್ಜಿ ಪ್ರತಿ<br>11. ಮೇಲೆ ತಿಳಿಸಿರುವಂತೆ ಮೂರು ಬೇಡಿಕೆ ಹುಂಡಿಗಳು<br>12. ನೇಮಕಾತಿ ಪ್ರಾಧಿಕಾರದಿಂದ ದೃಢೀಕೃತ ಸೇವಾ ಪ್ರಮಾಣ ಪತ್ರ ಮತ್ತು ವ್ಯಾಸಂಗ ಮಾಡಲು ಸರ್ಕಾರದಿಂದ ಪಡೆದ ಅನುಮತಿ ಪತ್ರ (ಸರ್ಕಾರಿ/ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಸ್ತುತ ಸೇವೆ ಸಲ್ಲಿಸುತ್ತಿದ್ದು, ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಮಾತ್ರ)<br>13. ಹೈದರಾಬಾದ್- ಕರ್ನಾಟಕ ವ್ಯಾಪ್ತಿಯ ಅಭ್ಯರ್ಥಿಗಳು 371(ಜೆ) ಪ್ರಮಾಣ ಪತ್ರ ಉಪವಿಭಾಗಾಧಿಕಾರಿಗಳಿಂದ ಪಡೆದಿರಬೇಕು.<br>14. ಅಭ್ಯರ್ಥಿಗಳಿಗೆ ಅನ್ವಯವಾಗುವ ಎಲ್ಲಾ ದಾಖಲೆಗಳ ಮೂಲ ಪ್ರತಿಗಳನ್ನು ಹೊಂದಿಲ್ಲದಿರುವ ಅಭ್ಯರ್ಥಿಗಳು ಕೌನ್ಸಿಲಿಂಗ್‌ಗೆ ಅರ್ಹತೆ ಹೊಂದಿರುವುದಿಲ್ಲ. |

ಸೂಚನೆಗಳು:

1. ಸಂಸ್ಥೆಗಳ ಬದಲಾವಣೆ ಬಯಸುವ ಅಭ್ಯರ್ಥಿಗಳು, ಪರಸ್ಪರ ವರ್ಗಾವಣೆ ಬಯಸುವ ಅಭ್ಯರ್ಥಿಗಳು, ಈಗಾಗಲೇ ಸಂಸ್ಥೆಗಳಲ್ಲಿ ದಾಖಲಾತಿ ಪಡೆದಿರುವ ಅಭ್ಯರ್ಥಿಗಳು, ವ್ಯವಸ್ಥಾಪಕ ಕೇಂದ್ರದಲ್ಲಿ ದಾಖಲಾತಿ ಪಡೆದು ದಾಖಲಾತಿ ಪತ್ರವನ್ನು ಹೊಂದಿರುವ ಅಭ್ಯರ್ಥಿಗಳು ದಿನಾಂಕ: 25–09–2019ರಿಂದ ನಡೆಯುವ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅರ್ಹತೆ ಹೊಂದಿರುವುದಿಲ್ಲ.
2. ಭಾಗಶ: (Partial) ಮೂಲ ದಾಖಲೆಗಳನ್ನು ಹೊಂದಿರುವ ಅಭ್ಯರ್ಥಿಗಳೂ ಸಹ ಕೌನ್ಸಿಲಿಂಗ್‌ಗೆ ಅರ್ಹತೆ ಹೊಂದಿರುವುದಿಲ್ಲ.
3. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸದೇ ಇರುವ ಅಭ್ಯರ್ಥಿಗಲು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.
4. ಕೌನ್ಸಿಲಿಂಗ್ ವೇಳಾ ಪಟ್ಟಿಯಲ್ಲಿ ಆಯಾ ದಿನಾಂಕಗಳ ರ್‍ಯಾಂಕ್ ಹಾಗೂ ಪ್ರವರ್ಗವಾರು ನೋಂದಣಿ ಸಂಖ್ಯೆಗಳನ್ನು ನೀಡಲಾಗಿದೆ. ಇದನ್ನು ಗಮನಿಸಿ ಅಭ್ಯರ್ಥಿಗಳು ಆಯಾ ದಿನಾಂಕಗಳಂದು ನಿಗದಿತ ಸಮಯಕ್ಕೆ ಕೌನ್ಸಿಲಿಂಗ್‌ಗೆ ಹಾಜರಾಗುವುದು ಕಡ್ಡಾಯ. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳನ್ನು ನಂತರದ ದಿನಗಳ ಕೌನ್ಸಿಲಿಂಗ್‌ನಲ್ಲಿ ಪರಿಗಣಿಸುವುದಿಲ್ಲ.
5. ಅಭ್ಯರ್ಥಿಯು ಒಂದು ಬಾರಿ ಲಭ್ಯವಿರುವ ಪ್ರವರ್ಗವಾರು ಕಾಲೇಜಿನ ಸೀಟನ್ನು ಆಯ್ಕೆ ಮಾಡಿಕೊಂಡ ನಂತರ ಮತ್ತೊಂದು ಕಾಲೇಜನ್ನು ಪಡೆದುಕೊಳ್ಳಲು ಅರ್ಹರಿರುವುದಿಲ್ಲ.
6. ಅರ್ಜಿ ಸಲ್ಲಿಸಿದ್ದು ಕೌನ್ಸಿಲಿಂಗ್‌ಗೆ ಅರ್ಹರಿರುವ ಎಲ್ಲಾ ಅಭ್ಯರ್ಥಿಗಳ ರ್‍ಯಾಂಕ್ ಮತ್ತು ಕೌನ್ಸಿಲಿಂಗ್‌ಗೆ ಸಂಬಂಧಿಸಿದ ಮಾಹಿತಿಯು www.schooleducation.kar.nic.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.
7. ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಅಭ್ಯರ್ಥಿಗಳ ಆಯ್ಕೆಯನ್ನು ತೀರ್ಮಾನ ಮಾಡುವ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದು ಅಭ್ಯರ್ಥಿಯ ರ್‍ಯಾಂಕ್‌ನಲ್ಲಿ ವ್ಯತ್ಯಾಸವಾದಲ್ಲಿ ಅಂತಹ ಅಭ್ಯರ್ಥಿಗಳು ಆಯಾಯ ವಿಷಯವಾರು, ಪ್ರವರ್ಗವಾರು ಮರು ನಿಗದಿಪಡಿಸಿದ ರ್‍ಯಾಂಕ್ ಸ್ಥಾನದಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗಬೇಕು.
8. ಪ್ರಸ್ತುತ ಚಾಲ್ತಿಯಲ್ಲಿರುವ ಕೌನ್ಸಿಲಿಂಗ್ ಪ್ರಕ್ರಿಯೆ ಮುಕ್ತಾಯವಾದ ನಂತರ ಸರ್ಕಾರಿ ಕೋಟಾದ ಸೀಟುಗಳು ಉಳಿದಲ್ಲಿ ಮಾತ್ರ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಮುಂದಿನ ರ್‍ಯಾಂಕ್‌ಗಳಿಗೆ ಮುಂದುವರಿಸಲಾಗುವುದು. ಅದಕ್ಕೆ ಪ್ರತ್ಯೇಕ ಎರಡನೇ ಸುತ್ತಿನ ಕೌನ್ಸಿಲಿಂಗ್ ಪಟ್ಟಿಯನ್ನು ಪ್ರಕಟಿಸಲಾಗುವುದು.
9. ಕೌನ್ಸಿಲಿಂಗ್‌ಗೆ ಅಭ್ಯರ್ಥಿಯು ತನ್ನ ಜವಾಬ್ದಾರಿ ಹಾಗೂ ಸ್ವಂತ ಖರ್ಚಿನ ಮೇಲೆ ಹಾಜರಾಗುವುದು.
10. ಅಗತ್ಯ ಮಾಹಿತಿಯನ್ನು ಪಡೆಯಲು :– (ಸಹಾಯವಾಣಿ ಸಂಖ್ಯೆಗಳು)

| | |
|---|---|
| ಕೇಂದ್ರೀಕೃತ ದಾಖಲಾತಿ ಘಟಕ | 080–22228805 |
| ಬೆಂಗಳೂರು | 080–22483140 |
| | 080–22483145 |

**<u>ವಿಶೇಷ ಸೂಚನೆ:</u>**

**ದಿನಾಂಕ: 26–09–2019 ಹಾಗೂ 27–09–2019ರಂದು ರಾಷ್ಟ್ರೀಕೃತ ಬ್ಯಾಂಕ್‌ಗಳ ಸಿಬ್ಬಂದಿ ವರ್ಗದವರು ಮುಷ್ಕರ ಹೂಡುವ ಸಂಭವನೀಯತೆ ಇದ್ದು ಬ್ಯಾಂಕಿನ ವಹಿವಾಟುಗಳು ಸ್ಥಗಿತಗೊಳ್ಳುವ ಕಾರಣದಿಂದಾಗಿ ಅಭ್ಯರ್ಥಿಗಳು ಕೌನ್ಸಿಲಿಂಗ್‌ಗೆ ಬರುವುದಕ್ಕೆ ಪೂರ್ವಭಾವಿಯಾಗಿ ಅಭ್ಯರ್ಥಿಗಳ ಸೂಚನೆಗಳಲ್ಲಿ ನೀಡಿರುವಂತೆ ನಿಗದಿತ ಮೌಲ್ಯದ ಬ್ಯಾಂಕ್ ಹುಂಡಿಗಳನ್ನು ಸಿದ್ಧಪಡಿಸಿಕೊಂಡು ಕೌನ್ಸಿಲಿಂಗ್‌ಗೆ ಹಾಜರಾಗುವುದು.**

(ವಿಶೇಷಾಧಿಕಾರಿ)
ಕೇಂದ್ರೀಕೃತ ದಾಖಲಾತಿ ಘಟಕ